ಶ್ರೀ ವಾಟಾಳ್ ನಾಗರಾಜ್:- ವಾಹನಗಳನ್ನು ನಿಲ್ಲಿಸಿದ್ದು ನ್ಯಾಯಾಲಯ ಆದೇಶ ಕೊಟ್ಟಮೇಲೆ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ ಸಮಿತಿ ಮಾಡುವ ಬಗ್ಗೆ ಹಾಗೂ ಕಟ್ಟುವ ಬಗ್ಗೆ ಉತ್ತರ ಕೊಡಲಿ.

ಅಧ್ಯಕ್ಷರು :- ನಾವು 10-15ಕ್ಕೆ ಶುರು ಮಾಡಿದ್ದು 10 ನಿಮಿಷ ಮುಗಿದು ಹೋಯಿತು.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಸದಸ್ಯರು ಹೇಳಿದ ವಿಷಯದ ಕುರಿತು ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್.ರಾಜಣ್ಣ :- ಮಾನ್ಯ ಅಧ್ಯಕ್ಷರೇ,

In 1984-85, there is a clear standing instruction by the Government of Karnataka to protect the playgrounds and parks.

ಆದರೆ ಇವತ್ತು ಬೆಂಗಳೂರು ಸಿಟಿಯಲ್ಲಿ ಕೆರೆ ಕುಂಟೆ ಎಲ್ಲಾ ಮಾಯವಾಗಿದೆ.

ಸುಳ್ಯ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ

62 (243) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ 3 ವರ್ಷಗಳಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬಂದ ಅನುದಾನ ಅಥವಾ ನೆರವು ಎಷ್ಟು (ವರ್ಷವಾರು ವಿವರ ನೀಡುವುದು)

ಆ) ಆ ಪೈಕಿ ವೆಚ್ಚ ಮಾಡಲಾದ ಒಟ್ಟು ಹಣ ಎಷ್ಟು?
(ಜಿಲ್ಲಾವಾರು ವಿವರ ನೀಡುವುದು)

ಇ) ಸುಳ್ಯ ತಾಲ್ಲೂಕಿನಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ. ಹಾಗೂ ಉಳಿಕೆ ಹಣ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) 1994-95 ಮತ್ತು 1995-96ನೇ ವರ್ಷಗಳಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿರುವುದಿಲ್ಲ. ಆದರೆ 1996-97ರಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ 12.64 ಕೋಟಿ ರೂ.ಗಳನ್ನು ರಾಜ್ಯಕ್ಕೆ ಮಂಜೂರು ಮಾಡಿದ್ದು ಈ ಪೈಕಿ 9.48 ಕೋಟಿ ರೂ.ಗಳನ್ನು ಮಂಡಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಆ) 1994-95 ಮತ್ತು 1995-96ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲವಾದ್ದರಿಂದ ಖರ್ಚು ಮಾಡಿರುವುದಿಲ್ಲ. 1996-97ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಂದ ಹಣವನ್ನು ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಡಿ ಒಹೆಚ್7ಎಸ್ ಜಿ ಎಂ 97, ದಿನಾಂಕ: 22-3-97 ರಂದು ಬಿಡುಗಡೆ ಮಾಡಿದ ಕಾರಣ 1996-97ನೇ ಸಾಲಿನಲ್ಲಿ ರಾಜ್ಯದ 184 ಸ್ಲಂಗಳಲ್ಲಿ ತಲಾ 6.75 ಲಕ್ಷದಂತೆ ಮೂಲಭೂತ ಸೌಕರ್ಯ ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಕೆಲಸ ಪ್ರಗತಿಯಲ್ಲಿದೆ ಜಿಲ್ಲವಾರು ವಿವರ ಅನುಬಂಧ- I ರಲ್ಲಿ ಲಗತ್ತಿಸಲಾಗಿದೆ.

ಇ) ಸುಳ್ಯ ತಾಲ್ಲೂಕಿನಲ್ಲಿ ಯಾವುದೇ ಪೋಷಣೆ ಕೊಳಚೆ ಪ್ರದೇಶಗಳಿಲ್ಲದೆ ಇರುವುದರಿಂದ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲವಾ ಕಾರಣ ಹಣ ವೆಚ್ಚವಾಗಿರುವುದಿಲ್ಲ.

ಅನುಬಂಧ - 1

1997-98ನೇ ಸಾಲಿನ ರಾಷ್ಟ್ರೀಯ ಕೊಳಚೆ ಅಭಿವೃದ್ಧಿ ಕಾರ್ಯಕ್ರಮದಡಿ ಜಿಲ್ಲಾವಾರು ನಿಗಧಿಪಡಿಸಿದ ಹಣದ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿಗಧಿಪಡಿಸಿದ ಹಣದ ವಿವರ (ಲಕ್ಷ ರೂ.ಗಳಲ್ಲಿ)
1.	ಬೆಂಗಳೂರು ನಗರ	94.50
2.	ಬೆಂಗಳೂರು ಗ್ರಾಮಾಂತರ	54.00
3.	ತುಮಕೂರು	67.50
4.	ಕೋಲಾರ	74.25
5.	ಹಾಸನ	54.00
6.	ಚಿಕ್ಕಮಗಳೂರು	40.50
7.	ದಕ್ಷಿಣ ಕನ್ನಡ	40.50
8.	ಮೈಸೂರು	94.50
9.	ಮಂಡ್ಯ	47.25
10.	ಕೊಡಗು	6.75
11.	ಶಿವಮೊಗ್ಗ	67.50
12.	ಚಿತ್ರದುರ್ಗ	60.75
13.	ಹುಬ್ಬಳ್ಳಿ	121.50
14.	ಉತ್ತರ ಕನ್ನಡ	47.25
15.	ಬಿಜಾಪುರ	81.00
16.	ಬೆಳಗಾಂ	87.75
17.	ಗುಲ್ಬರ್ಗ	67.50
18.	ಬೀದರ್	33.75
19.	ಬಳ್ಳಾರಿ	47.25
20.	ರಾಯಚೂರು	60.75

ಸಂಖ್ಯೆ: ವ ಇ 9 ಕೊಮಂವಿ 98

ಶ್ರೀ ಎಸ್. ಅಂಗಾರ :- ಮಾನ್ಯ ಅಧ್ಯಕ್ಷರೇ, ಕಳೆದ 3 ವರ್ಷಗಳಿಂದ ಕೊಳಚೆ ಪ್ರದೇಶಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆ ಆದ ಅನುದಾನ ಎಷ್ಟು ಎಂದು ಕೇಳಿದ್ದೇನೆ. 12.60 ಕೋಟಿ ಎಂದು ಉತ್ತರ ಕೊಟ್ಟಿದ್ದಾರೆ. ಈ ಪೈಕಿ ಖರ್ಚು ಮಾಡಿದ ಒಟ್ಟು ಹಣ ಎಷ್ಟು ಎಂದು ಕೇಳಿದ್ದಕ್ಕೆ, 184 ತಾಲ್ಲೂಕುಗಳಿಗೆ ತಲಾ 6.70 ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ. ಮೂರನೇಯದಾಗಿ ಸುಳ್ಯ ತಾಲ್ಲೂಕಿನಲ್ಲಿ ಇರುವ

ಕೊಳಚೆ ಪ್ರದೇಶಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂದು ನಾನು ಕೇಳಿದಾಗ ಸುಳ್ಯ ತಾಲ್ಲೂಕಿನಲ್ಲಿ ಯಾವುದೇ ಕೊಳಚೆ ಪ್ರದೇಶ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಸುಳ್ಯ ನಗರ ಪ್ರದೇಶದಲ್ಲಿ ಗಾಂಧೀನಗರ ಎನ್ನುವಂತಹ ಜಾಗದಲ್ಲಿ ಹರಿಜನರು ವಾಸ ಮಾಡುವಂತಹ ಜಾಗ. ಅಲ್ಲಿ ಪೇಟೆಯಿಂದ ಬರುವಂತಹ ಎಲ್ಲಾ ಕೊಳಚೆ ನೀರು ಆ ಪ್ರದೇಶದ ಮಧ್ಯೆ ಭಾಗದಲ್ಲಿ ಹರಿದು ಹೋಗುತ್ತದೆ. ಅಲ್ಲಿ ಒಂದು ಶೌಚಾಲಯ ಕೂಡ ಇಲ್ಲ.

ಅಧ್ಯಕ್ಷರು :- ಸುಳ್ಯದಲ್ಲಿ ಕೊಳಚೇ ಪ್ರದೇಶ ಇದೆ. ಅಲ್ಲಿ ಕೆಲಸ ತೆಗೆದುಕೊಳ್ಳಬೇಕು ಎನ್ನುವುದು ತಮ್ಮ ಅಭಿಪ್ರಾಯ.

ಶ್ರೀ ಹೆಚ್. ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನಲ್ಲಿ ಮೊದಲು ಯಾವುದೇ ಕೊಳಚೆ ಪ್ರದೇಶ ಇರುವುದಿಲ್ಲ. ಆ ರೀತಿ ಯಾವುದಾದರೂ ಕೊಳಚೆ ಪ್ರದೇಶ ಇದ್ದರೆ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಅಂಗಾರ:- ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನಲ್ಲಿ 3-4 ಕಡೆ ಕೊಳಚೆ ಪ್ರದೇಶ ಇದೆ. ಆ ಕೊಳಚೇ ಪ್ರದೇಶವನ್ನು ನಿವಾರಣೆ ಮಾಡಬೇಕು. ಮಾನ್ಯ ಸಚಿವರು ಈ ಹಿಂದೆ 6.70 ಲಕ್ಷ ರೂ. ಕೊಡುತ್ತೇನೆಂದು ಈ ಸಭೆಯಲ್ಲಿ ಉತ್ತರ ಕೊಟ್ಟಿದ್ದರು. ಇದುವರೆಗೂ ಅದು ಕಾರ್ಯಗತವಾಗಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ

ಮಂಗಳೂರು ನಗರಕ್ಕೆ ಹೈಟೆಕ್ ಬಸ್ಸುಗಳನ್ನು ಒದಗಿಸುವುದು

63 (288) ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಸಾರಿಗೆ ಸಂಸ್ಥೆಯ ಮಲಯದಲ್ಲಿ 4 ಲಕ್ಷ ಕಿ.ಮೀ. ಗಿಂತ ಹೆಚ್ಚು ಓಡಾಡಿದ ಬಸ್‌ಗಳ ಸಂಖ್ಯೆ ಎಷ್ಟು? ಅವುಗಳನ್ನು ಬದಲಾಯಿಸಿ ಹೊಸ ಹೈ-ಟೆಕ್ ಬಸ್‌ಗಳನ್ನು ಯಾವಾಗ ಖರೀದಿಸಲಾಗುವುದು?

ಆ) ಸದರಿ ವಲಯದಲ್ಲಿ ತಾಂತ್ರಿಕ ಹಾಗೂ ಇತರ ಸಿಬ್ಬಂದಿಗಳ ಕೊರತೆ ಇದೆಯೇ? ಹಾಗೂ ಅದನ್ನು ಯಾವಾಗ ತುಂಬಲಾಗುವುದು?

ಇ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮಂಗಳೂರು ವಲಯದಲ್ಲಿ ಕೈಗೊಂಡಿರುವ ಹೊಸ ಅಭಿವೃದ್ಧಿ ಕಾರ್ಯಗಳಾವುವು? ಹಾಗೂ ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಒಟ್ಟು 480 ವಾಹನಗಳಿದ್ದು, ಅವುಗಳಲ್ಲಿ 272 ವಾಹನಗಳು 4ಲಕ್ಷ ಕಿ.ಮೀ ಗಿಂತಲೂ ಹೆಚ್ಚು ಓಡಿರುವ ವಾಹನಗಳಾಗಿರುತ್ತವೆ. ಅವುಗಳಲ್ಲಿ 214 ಗ್ರಾಮಾಂತರ ಮಾದರಿಯ ವಾಹನಗಳು 47 ಅರೆಸುವಿಹಾರಿ ವಾಹನಗಳು 9 ಸುವಿಹಾರಿಗಳ ಮತ್ತು 2 ಅಲ್ಟ್ರಾ ಸುವಿಹಾರಿ ವಾಹನಗಳಾಗಿರುತ್ತವೆ 2 ಅಲ್ಟ್ರಾ ಸುವಿಹಾರಿ ವಾಹನಗಳನ್ನು ಮೇಲ್ಕಂಡ ವಿಭಾಗಕ್ಕೆ ಮಾರ್ಚ್ 1998ರ ಅಂತ್ಯದ ವೇಳೆಗೆ ಕೊಡಲಾಗುವುದು.